O.S. 240/2014

P.W.1

**ಸಾಕ್ಷಿಯನ್ನು ದಿನಾಂಕಃ 13-06-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ.ಕೆ.ಎಂ.ಸಿ. ವಕೀಲರವರಿಂದಃ**

4. ನನ್ನ ಮತ್ತು ನನ್ನ ತಂಗಿಯರ ಮದುವೆಯನ್ನು 1 ನೇ ಪ್ರತಿವಾದಿಯೇ ಖರ್ಚನ್ನು ನೋಡಿಕೊಂಡು ಆಕೆಯೇ ವಿವಾಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವೆರದು ನನ್ನ ಗಂಡನೇ ವಿವಾಹವನ್ನು ಮಾಡಿಕೊಟ್ಟಿರುವರು. 1 ನೇ ಪ್ರತಿವಾದಿಗೆ 6 ಜನ ಮಕ್ಕಳು ಇರುತ್ತಾರೆ. ನನಗೆ ಅವರ ಹೆಸರು ಗೋತ್ತಿರುವುದಿಲ್ಲ. ನಾನು ವಿವಾಹವಾದ ಸಮಯದಲ್ಲಿ 1 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು ಇದ್ದರು. ಅವರೆಂದರೆ ರಾಜ ಮತ್ತು ಸಿದ್ದಪ್ಪ. 1 ನೇ ಪ್ರತಿವಾದಿಯ 6 ಜನ ಮಕ್ಕಳು ವಿಳಾಸ ಮತ್ತು ಇತರೆ ವಿವರಗಳು ನನಗೆ ಗೋತ್ತಿರುವುದಿಲ್ಲ. ನನ್ನ ವಿವಾಹವಾಗಿ ಸುಮಾರು 40 ವರ್ಷಗಳಾದವು. ನಾನು ಹಿರೇ ಮೇಗಳಗೇರಿಯಲ್ಲಿ ವಾಸವಿರುವೆನು. ನಾನು ವಾದಪತ್ರದಲ್ಲಿ ಆಗಲೀ, ಸಾಕ್ಷಿ ಪ್ರಮಾಣಪತ್ರದಲ್ಲಿ ಆಗಲಿ ನನ್ನ ತಂದೆ ಹಾಗೂ ಅವರ ಸಹೋದರರು ಜಂಟಿಯಾಗಿ ವಾಸಮಾಡಿರುವರು ಅಂತ ಬರೆಸಿರುವುದಿಲ್ಲ. ದಾವಾ ಶೇಡ್ಯೂಲಿನ ಆಸ್ತಿಗಳು, 1 ನೇ ಪ್ರತಿವಾದಿ ಪ್ರತಿವಾದಪತ್ರದೊಂದಿಗೆ ಸಲ್ಲಿಸಿದ ಕೌಂಟರ್ ಕ್ಲೈಮ್ ಆಸ್ತಿಗಳು ಇವೆಲ್ಲವೂ ನನ್ನ ತಾತನ ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಜುಬಾನಿ ಪಾರಿಕತ್ ಕುರಿತು ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆ. ಅದಕ್ಕೆ ಸಂಬಂದಪಟ್ಟಂತೆ ಮೂಲ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. 1 ನೇ ಪ್ರತಿವಾದಿಯ ಮಕ್ಕಳನ್ನು ನಾನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿರುವುದಿಲ್ಲ. ನನ್ನ ತಂದೆ ಹಾಗೂ ಅವರ ಸಹೋದದರು ನಡುವೆ ಪಾಲುವಿಭಾಗವು 1980 ರಲ್ಲಿ ಆಗಿರುವುದು. 1980 ಹೊರತಾಗಿ ಬೇರೆ ಪಾಲುವಿಭಾಗವಾಗಿರುವುದಿಲ್ಲ. ನನ್ನ ತಂದೆಯ ಸಹೋದರಿಯರು ಸದರಿ ಪಾಲುವಿಭಾಗದಲ್ಲಿ ಪಾಲನ್ನು ತೆಗೆದುಕೊಂಡಿರುವುದಿಲ್ಲ. ನನ್ನ ತಂದೆಯ ಸಹೋದರಿಯರ ಮಕ್ಕಳು ಜೀವಂತ ಇರುವರು. ಅವರನ್ನು ನಾನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿರುವುದಿಲ್ಲ. ನನ್ನ ತಂದೆ ಈಗ ಜೀವಂತವಿರುವುದಿಲ್ಲ. ಅವರು ಯಾವಾಗ ತೀರಿಕೊಂಡರು ಅಂತ ನನಗೆ ನೆನಪಿರುವುದಿಲ್ಲ. ಈ ದಾವಾ ಆಸ್ತಿಗಳ ಹಾಗೂ ಕೌಂಟರ್ ಕ್ಲೈಮ್ ಆಸ್ತಿಗಳ ಕುರಿತು ಹಾಗೂ ಈಗಾಗಲೇ ನನ್ನ ತಂದೆ ಹಾಗುಾ ಸಹೋದರರರ ನಡುವೆ ಆಗಿದೆ ಎಂದು ಹೇಳಲಾದ ಪಾಲುವಿಭಾದ ಕುರಿತು ನನ್ನ ತಂದೆ ಜೀವಂತ ಇರುವಾಗ ನನಗೆ ಮಾಹಿತಿ ಇರಲಿಲ್ಲ. 6 ಮತ್ತು 7 ನೇ

O.S. 240/2014

P.W.1

ಪ್ರತಿವಾದಿಯರು ನನ್ನ ತಂದೆಯವರ ವಿರುದ್ಧ ಅಸಲು ದಾವಾ ನಂ.114/2005 ರಂತೆ ಇನ್ನೊಂದು ದಾವೆಯನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ದಾವೆ ವಜಾ ಆಯಿತು ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ದಾವಾ ಆಸ್ತಿಗಳನ್ನು ಹಾಗೂ ಕೌಂಟರ್ ಕ್ಲೇಮ್ ಆಸ್ತಿಗಳನ್ನು ಸಮಾನವಾಗಿ ಹಂಚಿಕೊಳ್ಳೋಣ ಎಂದು 6 ಮತ್ತು 7 ನೇ ಪ್ರತಿವಾದಿಗಳ ಬಳಿ ಹೇಳಿದ ಕಾರಣ ಸದರಿ 6 ಮತ್ತು 7 ನೇ ಪ್ರತಿವಾದಿಗಳು 1 ಆಸ್ತಿಗೆ ಸಂಬಂದಿಸಿದಂತೆ ಅಸಲು ದಾವಾ ನಂ.114/2005 ರಂತೆ ದಾವಾಯನ್ನು ಸಲ್ಲಿಸಿದರು ಎಂದರೆ ಸರಿಯಲ್ಲ. ನನ್ನ ತಂದೆ ಅವರ ಸಹೋದರರ ನಡುವೆ ಮನಸ್ತಾಪ ಬರಲು ಹಾಗೂ ನಾನು ಈ ದಾವೆಯನ್ನು ಸಲ್ಲಿಸಲು 6 ಮತ್ತು 7 ನೇ ಪ್ರತಿವಾದಿಯರು ಕಾರಣರಾಗಿರುವರು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನನನ್ನು ಮುಂದೆ ಇಟ್ಟುಕೊಂಡು 6 ಮತ್ತು 7 ನೇ ಪ್ರತಿವಾದಿಯರು ಅಸಲು ದಾವೆ ನಂ.69/2009 ಅನ್ನು ನನ್ನ ಚಿಕ್ಕಪ್ಪನಾದ ರೇವಣಸಿದ್ದಪ್ಪ, ಹಾಗೂ 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳ ಮೇಲೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆ ಕೂಡ ವಜಾ ಆಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ.

6. ಬಸಪ್ಪನು ಅಸಲು ದಾವಾ ನಂ.25/2009 ಅನ್ನು ನನ್ನ ಚಿಕ್ಕಪ್ಪ ರೇವಣಸಿದ್ದಪ್ಪ ಹಾಗೂ 1 ನೇ ಪ್ರತಿವಾದಿಯ ಮಕ್ಕಳ ಮೇಲೆ ಸಲ್ಲಿಸಿದರು ಎಂದರೆ ಸರಿಯಲ್ಲ. ಸದರಿ ಎಲ್ಲಾ ದಾವೆಗಳಿಗೆ ನಾನು ಕೂಡ ಕಾರಣಳಾಗಿರುತ್ತೇನೆ ಎಂದರೆ ಸರಿಯಲ್ಲ. ಜೀವನ ನಡೆಸಲು ಕಷ್ಟವಾದ ಕಾರಣ 1 ನೇ ಪ್ರತಿವಾದಿಯು 6 ಮತ್ತು 7 ನೇ ಪ್ರತಿವಾದಿಯ ವಿರುದ್ಧ ಅಸಲು ದಾವ ನಂ.147/2009 ರಂತೆ ದಾವೆಯನ್ನು ಹೂಡಿದ್ದಳು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪಂದಿರ ವಿರುದ್ಧ ಶಾಶ್ವತ ಪ್ರತಿಭಂದಕಾಜ್ಞೆಯನ್ನು ನ್ಯಾಯಾಲಯವು ಡಿಕ್ರಿ ಮಾಡಿತ್ತು ಎಂದರೆ ಸರಿಯಲ್ಲ. ಅಸಲು ದಾವಾ ನಂ.147/2009 ರ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಸದರಿ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯ ವಿರುದ್ಧ ಸಾಕ್ಷಿಯನ್ನು ಹೇಳಿದ್ದೇನೆ ಎಂದರೆ ಸರಿ. ಸಾಕ್ಷಿಗೆ ವಕೀಲರು ಅಸಲು ದಾವಾ ನಂ.147/2009 ಇದರಲ್ಲಿ ಸಲ್ಲಿಸಲಾದ ಸಾಕ್ಷಿಯ ವಿಚಾರಣಾ ಪ್ರಮಾಣಪತ್ರವನ್ನು ತೋರಿಸಿದ್ದು, ಇದು ನಿಮ್ಮ ಸಾಕ್ಷಿ ಪ್ರಮಾಣಪತ್ರ ಆಗಿರುವುದು ಹಾಗೂ ಅದರಲ್ಲಿ ಇರುವ ಸಹಿ ನಿಮ್ಮದಾಗಿರುವುದು ಎಂದು ಸಲಹೆ ಮಾಡಿರುವರು, ಸದರಿ ಸಲಹೆಯನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ದಾವೆಯು 1 ನೇ ಪ್ರತಿವಾದಿಯ ಪರವಾಗಿ ಆದ ಕಾರಣ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಯರ ಚಿತಾವಣೆಯಿಂದ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವಿವಾಹಕಾಲಕ್ಕೆ 1 ನೇ ಪ್ರತಿವಾದಿ ನನ್ನ ಗಂಡನಿಗೆ ರೂ.20,000/- ಹಣ ಮತ್ತು ನನಗೆ 2 ತೊಲೆ ಬಂಗಾರವನ್ನು ನೀಡಿರುವಳು ಎಂದರೆ ಸರಿಯಲ್ಲ. ನನ್ನ ಇನ್ನೊಬ್ಬ ಸಹೋದರಿಗೆ ರೂ.25,000/- ಹಣ ಮತ್ತು 5

O.S. 240/2014

P.W.1

ತೊಲೆ ಬಂಗಾರವನ್ನು ನೀಡಿರುವಳು ಎಂದರೆ ಸರಿಯಲ್ಲ. ನಾನು ಇಷ್ಟೆಲ್ಲಾ ದಾವೆ ಸಲ್ಲಿಸಿದರೂ ಸಹಿತ 2013 ವರಗೂ 1 ನೇ ಪ್ರತಿವಾದಿ ನನಗೆ ಹಾಗೂ ನನ್ನ ಅಕ್ಕತಂಗಿಯರಿಗೆ ತವರು ಮನೆಯ ಉಪಚಾರವನ್ನು ಮಾಡಿರುವಳು ಎಂದರೆ ಸರಿಯಲ್ಲ. ನಾನು 6 ಮತ್ತು 7 ನೇ ಪ್ರತಿವಾದಿಗೆ ಚಿತಾವಣೆ ಮಾಡಿ 1 ನೇ ಪ್ರತಿವಾದಿಯರ ವಿರುದ್ದ ಕ್ರಿಮಿನಲ್ ಕೇಸ್ ನಂ.518/2017 ರಂತೆ ಹಾಕಿಸಿರುವೆನು ಎಂದರೆ ಸರಿಯಲ್ಲ. ಸದರಿ ಕೇಸು ದಾಖಲಾದ 1 ತಿಂಗಳಲ್ಲಿ 6 ನೇ ಪ್ರತಿವಾದಿ ಮೃತಪಟ್ಟನು ಎಂದರೆ ಸರಿಯಲ್ಲ. ಸದರಿ ಕೇಸಿನಲ್ಲಿ 1 ನೇ ಪ್ರತಿವಾದಿ ಬಿಡುಗಡೆಯಾದರು ಎಂದರೆ ನನಗೆ ಗೋತ್ತಿರುವುದಿಲ್ಲ. 1 ನೇ ಪ್ರತಿವಾದಿ ನನ್ನ ಮದುವೆ ಖರ್ಚನ್ನು ನೋಡಿಕೊಂಡ ಕಾರಣ ಹಾಗೂ ಮತ್ತು ವಿವಾಹಕಾಲಕ್ಕೆ ಬಂಗಾರ, ಹಣ, ಉಪಚಾರವನ್ನು ನೀಡಿದ ಕಾರಣ ಈ ದಾವೆ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

13-06-2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**